| Deposition Sheets (RP.No.57) Form No.4 |
| --- |

**IN THE COURT OF ADDL. CIVIL JUDGE & J.M.F.C., KUSHTAGI**

**Criminal Case No.40/2016**

ಪಿ.ಡಬ್ಲ್ಯು : 4 ಸಿ.ಡಬ್ಲ್ಯು : 6

ದಿನಾಂಕ 19.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟಿ ಸವಾಲುಃ ಆರೋಪಿ ನಂಬರ:1 ಮತ್ತು 2 ರವರ ಪರ ಶ್ರೀ ಎಸ್ ಎನ್ ಪಿ ವಕೀಲರಿಂದಃ**

ನಮ್ಮ ಜಮೀನು ಹಿರೇಗೊಣ್ಣಾಗರ ಗ್ರಾಮದಲ್ಲಿ ಬರುತ್ತವೆ. ನಮ್ಮ ಜಮೀನಿನ ಪಹಣಿ ಪತ್ರಿಕೆಗಳು ಸದ್ಯ ಈರಪ್ಪ ಮತ್ತು ಮಕಾಳೇಪ್ಪ, ಮಲ್ಲಪ್ಪ ಮತ್ತು ಕಳಕಪ್ಪನ ಜಂಟಿ ಹೆಸರಿನಲ್ಲಿರುತ್ತದೆ. ಮೊದಲು ನನ್ನ ತಂದೆಯ ಹೆಸರಿನಲ್ಲಿರುತ್ತವೆ. ಆರೋಪಿತರಾದ ಕಳಕಪ್ಪ, ಗಂಗಮ್ಮ ಮತ್ತು ನಾವು ಸಂಬಂದಿಕರು ಎಂದರೆ ಸರಿ. ಆರೋಪಿತರ ಜಮೀನು ಮತ್ತು ನಮ್ಮ ಪಕ್ಕದ ಜಮೀನಿನಲ್ಲಿ ಇರುವುದಿಲ್ಲ. ಆರೋಪಿತರ ಜಮೀನು ಜಿಗೇರಿ ಸೀಮಾದಲ್ಲಿ ಬರುತ್ತವೆ. ಜೀಗೇರಿ ಗ್ರಾಮ ಮೊದಲು ರೋಣ ತಾಲೂಕಿನಲ್ಲಿ ಬರುತ್ತದೆ ಸದ್ಯ ಗಜೇಂದ್ರಗಡ ತಾಲೂಕಿನಲ್ಲಿ ಬರುತ್ತವೆ. ಈಗ 1ನೇ ಆರೋಪಿಯು ತೀವ್ರ ರೋಗದಿಂದ ಬಳುಲುತ್ತಿದ್ದು ವಿಶ್ರಾಂತ ಸ್ಥಿತಿಯಲ್ಲಿರುತ್ತಾರೆ. ಸುಮಾರು 10 ವರ್ಷಗಳಿಂದ ಆರೋಪಿತರು ಹೊಲ ಮನೆ ಕೆಲಸ ಮಾಡುವುದಿಲ್ಲ ಮನೆಯಲ್ಲಿಯೆ ವಿಶ್ರಾಂತಿ ಮಾಡುತ್ತಾರೆ ಎಂದರೆ ಸರಿಯಲ್ಲ. ಪೋಲಿಸರು ನನ್ನ ಹೇಳಿಕೆಯನ್ನು ಹೊಲಕ್ಕೆ ಬಂದು ದಾಖಲಿಸಿಕೊಂಡಿರುತ್ತಾರೆ. ದೂರನ್ನು ನನ್ನ ಸಹೋದರನ್ನು ದಾಖಲಿಸಿರುತ್ತಾನೆ. ನಾನು ಹೇಳಿಕೆಗೆ ಸಹಿಯನ್ನು ಪೋಲಿಸ ಠಾಣೆಯಲ್ಲಿ ಮತ್ತು ನಮ್ಮ ಜಮೀನಿನಲ್ಲಿ ಮಾಡಿರುತ್ತೆನೆ. ನಮ್ಮ ಗ್ರಾಮದಲ್ಲಿ ಶೇಕಡಾ 80 ರಷ್ಟು ಜಮೀನುಗಳಲ್ಲಿ ಮೆಕ್ಕೆ ಜೋಳ ಬೆಳೆಯನ್ನು ಬೆಳೆಯುತ್ತಾರೆ ಎಂದರೆ ಸರಿ. ಆರೋಪಿತರು ಜರ್ಸಿ ಆಕಳುಗಳನ್ನು ಹೊಂದಿರುತ್ತಾರೆ ಎಂದರೆ ಸರಿ. ಆರೋಪಿತರು ತಮ್ಮ ಜಮೀನಿನಲ್ಲಿ ಬೆಳೆದ ಮೆಕ್ಕೆ ಜೋಳದ ಸೊಪ್ಪೆಯನ್ನು ಕೋಯ್ದು ತಮ್ಮ ಆಕಳುಗಳಿಗೆ ಹಾಕುತ್ತಾರೆ ಆರೋಪಿತರ ಜಮೀನುಗಳು ರೋಣ

ತಾಲೂಕಿನಲ್ಲಿ ಬರುವುದರಿಂದ ನಮ್ಮ ಜಮೀನಿನಲ್ಲಿ ಪ್ರವೇಶ ಮಾಡುವ ಪ್ರಶ್ನೆ ಬರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಮು.ಮಾ./ಮೆಕ್ಕೆಜೋಳದ ಸೊಪ್ಪೆಯನ್ನು ತೋರಿಸಿ ಈ ರೀತಿಯ ಸೊಪ್ಪು ನಮ್ಮ ಜಮೀನಿನ ಸೊಪ್ಪು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಅದು ನಮ್ಮ ಜಮೀನಿನ ಸೊಪ್ಪೆ ಆಗಿರುತ್ತದೆ ಎಂದು ನುಡಿಯುತ್ತಾರೆ. ಆರೋಪಿತರಿಗೂ ಮತ್ತು ನಮಗೂ ಸುಮಾರು ವರ್ಷಗಳಿಂದ ವೈಮನಸ್ಸು ಇರುತ್ತದೆ ಎಂದರೆ ಸರಿ. ಆರೋಪತರು ಮತ್ತು ನಮ್ಮ ನಡುವೆ ಜಮೀನಿನ ಕುರಿತು ಸಿವಿಲ್ ವ್ಯಾಜ್ ಬಾಕಿ ಇರುತ್ತದೆ ಎಂದರೆ ಸರಿ. ನಾವು 4 ರಿಂದ 5 ಜನ ಸಹೋದರರು ಇದ್ದು ನಮ್ಮ ಮನೆಯಲ್ಲಿ 15 ಜನ ಜಂಟಿ ಕುಟುಂಬದ ಸದಸ್ಯರು ಇರುತ್ತೆವೆ ಎಂದರೆ ಸರಿ. ಆರೋಪಿತರು ನಮ್ಮ ವಿರುದ್ದ ಅಪರಾಧಿಕ ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಸರಿ. ಆರೋಪಿತರು ನೀಡಿದ ದೂರಿಗೆ ಪ್ರತಿಯಾಗಿ ನಾವು ಸುಳ್ಳು ದೂರನ್ನು ನೀಡಿರುತ್ತೆವೆ ಎಂದರೆ ಸರಿಯಲ್ಲ. ಪಿರ್ಯಾದಿಯನ್ನು ಸುಮಾರು 10 ವರ್ಷಗಳ ಹಿಂದೆ ನೀಡಿದ್ದು ಆದರೆ ನಿಖರವಾದ ದಿನಾಂಕ ಮತ್ತು ತಿಂಗಳು ನನಗೆ ಗೊತ್ತಿಲ್ಲ. ಪೋಲಿಸರು ನನ್ನ ಹೇಳಿಕೆಯನ್ನು ದಾಖಲಿಸಿಕೊಂಡ ದಿನಾಂಕ, ತಿಂಗಳು ನನಗೆ ನೆನಪಿರುವುದಿಲ್ಲ. ಚಾಸಾ-1 ರವರು ನನ್ನ ಸಹೋದರ ಆಗಿರುವುದರಿಂದ ಅವರಿಗೆ ಅನುಕೂಲವಾಗಲೆಂದು ಉದ್ದೇಶಪೂರ್ವಕವಾಗಿ ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿ ಪ್ರಕರಣಕ್ಕೆ ಅನುಕೂಲವಾಗಲೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ಪೋಲಿಸರಿಗೆ ನೀಡಿರುವ ಹೇಳಿಕೆಯಲ್ಲಿನ ವಿಷಯಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಪ್ರಕರಣ ಚಾಲ್ತಿಯಲ್ಲಿರುವಾಗ 1 ನೇ ಆರೋಪಿಯ ಮಗನ ವಿರುದ್ದ ಇನ್ನೊಂದು ಪ್ರಕರಣ ದಾಖಲಿಸಿರುತ್ತೆವೆ ಎಂದರೆ ಸರಿ. ಆರೋಪಿತರು ಯಾವುದೆ ಅಪರಾಧ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/- 19.08.2025

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ಕುಷ್ಟಗಿ